ಶ್ರೀ ಎಚ್. ಸಿದ್ದವೀರಪ್ಪ— 1973-74 ನೇ ಸಾಲಿಗೆ ತಿರಸಿ ಆಸ್ಪತ್ರೆಗೆ ಔಷಧಿಗಾಗಿ 15 ರಿಂದ 25 ಸಾವಿರ ರೂಪಾಯಿಯವರೆಗೆ ಮಂಜೂರು ಮಾಡುತ್ತಾ ಇದ್ದೇವೆ. ಔಷಧಿಗಳು ಈಗ ಮೂವ್ ಆಗುತ್ತಾ ಇದೆ. I will make a comprehensive statement about the supply of medicines to various Hospitals in State if you permit it.

AIDED HOSTELS OTHER THAN D. C HOSTELS

67. SRI K. SIDDAIAH (Santhemarahally)—

Will the Minister for Education be pleased to state :—

(*a*) The number of hostels (other than S. C. and S. T.) for which aid (monetary or otherwise) is granted by Government in Mysore District ;

(*b*) The names of such hostels and the amount granted and the year from which it is granted ;

(*c*) Are the candidates belonging to all castes and communities admitted to these hostels ;

(*d*) Whether the Committee of Management in these hostels consists of members belonging to different castes and communities ;

(*e*) Whether there are any cooks and kitchen servants belonging to other castes employed respectively in these hostels ?

SRI A. R. BADARINARAYANA (Minister for Education):

(*a*) 17

(*b*) The particulars are given in the statement placed on the Table of the House*.

*Copy placed in the Mysore Legislative Library *vide No.* 1 dated 27-8-1973.

(Sri A. R. Badarinarayana)

(*c*) Yes

(*d*) and (*e*) The information in respect of each hostel is given in the statement placed on the Table of the House.*

ಶ್ರೀ ಕೆ. ಸಿದ್ದಯ್ಯ— ಸ್ವಾಮಿ, ಇದರಲ್ಲಿ ತಾವು (ಎ) ಗೆ ಉತ್ತರವಾಗಿ 17 ಎಂದು ಹೇಳಿದ್ದೀರಿ. ಇದರಲ್ಲಿ ಯಾವ ಯಾವ ಹಾಸ್ಟೆಲ್‌ಗಳಿಗೆ ಎಷ್ಟೆಷ್ಟು ಜಮೀನು ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ— ಜಮೀನಿನ ವಿಷಯವಾಗಿ ಸಂಬಂಧಪಟ್ಟ ಮಾಹಿತಿ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಸಿದ್ದಯ್ಯ— ತಾವು ಈಗ ಈ ಬಗ್ಗೆ ಒಂದು ತಃಖ್ತೆಯನ್ನು ಕೊಟ್ಟಿದ್ದೀರಿ. ಇದರಲ್ಲಿ ಎಲ್ಲಾ ಜಾತಿಯ ಹುಡುಗರೂ ಇದ್ದಾರೆ. ಮತ್ತು ಮ್ಯಾನೇಜ್‌ಮೆಂಟಿನಲ್ಲಿಯೂ ಕೂಡ ಎಲ್ಲಾ ಜಾತಿಯವರು ಇದ್ದಾರೆ ಮತ್ತು ಇದರಲ್ಲಿ ಅಡಿಗೆಯವರು ಮತ್ತು ಅಡಿಗೆಯ ಆಳುಗಳೂ ಕೂಡ ಎಲ್ಲಾ ಜಾತಿಯವರೂ ಇದ್ದಾರೆ. ನನ್ನ ಪ್ರಶ್ನೆ ಏನೆಂದರೆ ಯಾವ ಯಾವ ವಿದ್ಯಾರ್ಥಿನಿಲಯಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸ್ಟೂಡೆಂಟ್ಸ್ ಎಷ್ಟು ಜನ ಇದ್ದಾರೆ? ಮತ್ತು ಯಾವ ಯಾವ ಹಾಸ್ಟೆಲ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನ ಮ್ಯಾನೇಜ್‌ಮೆಂಟಿನಲ್ಲಿ ಇದ್ದಾರೆ ಮತ್ತು ಯಾವ ಯಾವ ಹಾಸ್ಟೆಲ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಅಡಿಗೆಯವರು ಮತ್ತು ಅಡಿಗೆಯ ಆಳುಗಳು ಇದ್ದಾರೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ— I have got all the details. ತಮಗೆ ಯಾವ ಹಾಸ್ಟೆಲ್ ಬಗ್ಗೆ ಎಷ್ಟರ ಬೇಕು ಎಂದು ಕೇಳಿದರೆ ಅದನ್ನು ಕೊಡುತ್ತೇನೆ

1-30 P. M. :

ಶ್ರೀ ಕೆ. ಸಿದ್ದಯ್ಯ :—ತಾವು (ಈ) ಪ್ರಶ್ನೆಗೆ ಉತ್ತರವಾಗಿ ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಸಭೆಯ ಮುಂದಿಟ್ಟಿರುವ ತಃಖ್ತೆಯಲ್ಲಿ ಕೊಡಲಾಗಿದೆ ಹೇಳಿದ್ದೀರಿ. ಅದರಲ್ಲಿ ಈ ಹಾಸ್ಟೆಲ್‌ಗಳಲ್ಲಿ ಕುಕ್ಸ್ ಮತ್ತು ಕಿಚನ್ ಸರ್‌ವೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಎಷ್ಟು ಇದ್ದಾರೆ ಮತ್ತು ಮ್ಯಾನೇಜ್‌ಮೆಂಟಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರು ಎಷ್ಟು ಜನರಿದ್ದಾರೆಂದು ತಿಳಿಸಬೇಕು?

ಶ್ರೀ ಎ. ಆರ್. ಬದರಿನಾರ್ಯಾಯಣ :— ಈ ಹಾಸ್ಟೆಲ್‌ಗಳಲ್ಲಿ ಯಾವುದರ ಬಗ್ಗೆ ಎಂಬುದನ್ನು ನಿರ್ದಿಷ್ಟವಾಗಿ ಕೇಳಿದರೆ ಹೇಳುತ್ತೇನೆ. ಸಾಮಾನ್ಯವಾಗಿ ಇವು ಗಳಲ್ಲಿ ಎಲ್ಲಾ ಕೋಮಿನವರು ಇರುತ್ತಾರೆ, ಸರ್ಕಾರದಿಂದ ಆರ್ಥಿಕವಾಗಿ ಅಥವಾ ಇತರ ರೀತಿಯಲ್ಲಿ ಸಹಾಯ ಪಡೆಯುವ ಹಾಸ್ಟೆಲ್‌ಗಳಲ್ಲಿ ವಿಶ್ವಕರ್ಮ, ನಾಯಕರು, ವಕ್ಕಲಿಗರು ಮತ್ತು ಡಿಪ್ರೆಸ್ಡ್ ಕ್ಲಾಸ್‌ನವರೂ ಇದ್ದಾರೆ.

ಶ್ರೀ ಕೆ ಸಿದ್ದಯ್ಯ :—ತಾವು ಕೊಟ್ಟಿರುವ ಪಟ್ಟಿಯಲ್ಲಿ ಎಷ್ಟು ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಅಡಿಗೆಯವರು ಮತ್ತು ಆಳುಗಳು ಇದ್ದಾರೆ ಅಲ್ಲದೆ ಮ್ಯಾನೇಜ್‌ಮೆಂಟಿನಲ್ಲಿ ಸದಸ್ಯರು ಎಷ್ಟು ಜನರು ಇದ್ದಾರೆ ಎಂಬುದನ್ನು ದಯಮಾಡಿ ತಿಳಿಸಬೇಕು ?

ಶ್ರೀ ಎ. ಆರ್. ಬದರಿನಾರ್ಯಾಯಣ.—ಸರ್ಕಾರಿ ಆಜ್ಞೆ ಪ್ರಕಾರ 35 ಪರ್ಸೆಂಟ್ ಬೇರೆ ಜನ್ಮಾಂಗದ ಮಕ್ಕಳನ್ನು ಆಡ್ಮಿಟ್ ಮಾಡಬೇಕು ಉಳಿದದ್ದನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳನ್ನು ಸೇರಿಸಬೇಕು. ಅದರಂತೆ ಅವರು ಸೇರಿಸಿ ಕೊಳ್ಳದಿದ್ದರೆ ಗ್ರಾಂಟ್ ಕೊಡುವುದಿಲ್ಲವೆಂದು ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ : ತಾವು (ಅ) ಗೆ ಉತ್ತರವಾಗಿ 17 ಹಾಸ್ಟೆಲ್‌ಗಳು ಇವೆಯೆಂದು ತಿಳಿಸಿದ್ದೀರಿ ? ಆದರೆ ಅವುಗಳಲ್ಲಿ ಅನೇಕ ಹಾಸ್ಟೆಲ್ ಗಳು ಸರಿಯಾಗಿ ಕೆಲಸ ಮಾಡದೆ ಅನೇಕವು ಗ್ರಾಂಟ್‌ಗಳನ್ನು ಕ್ಲೈಮ್ ಮಾಡುತ್ತಿ ವೆ ಅನ್ಯಾಯವಾಗಿ ಗ್ರಾಂಟ್ಸ್ ಹೋಗುತ್ತಾ ಇದೆ ಎಂದು ಅದರ ಬಗ್ಗೆ ಏನಾದರೂ ಕಂಪ್ಲೈಂಟ್ಸ್ ಬಂದಿವೆಯೇ ? ಬಂದಿದ್ದರೆ ಅದರ ಬಗ್ಗೆ ತಾವು ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ತಾವು ಹೇಳಿದಿರಿ ಕೆಲವು ಹಾಸ್ಟೆಲ್ ಗಳಲ್ಲಿ ಅನ್ಯಾಯ ನಡೆಯುತ್ತಿದೆಯೆಂದು. ಆದರೆ ಯಾವ ಹಾಸ್ಟೆಲ್‌ನಲ್ಲಿ ಆ ರೀತಿ ಅನ್ಯಾಯ ನಡೆಯುತ್ತಿದೆ ಎಂದು ಸರ್ಕಾರಕ್ಕೆ ಕಂಪ್ಲೈಂಟ್ಸ್ ಬಂದರೆ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅಂಥದ್ದು ತಮ್ಮ ಗಮನಕ್ಕೆ ಬಂದಿದ್ದರೆ ಸರ್ಕಾರದ ಗಮನಕ್ಕೆ ತನ್ನಿ, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕಬಾಡಿ :— ಈ 17 ಹಾಸ್ಟೆಲ್‌ಗಳಲ್ಲಿ ಏನಾದರೂ ಅನ್ಯಾಯ ನಡೆದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಆದರೆ ಅನ್ಯಾಯ ನಡೆಯುತ್ತಿರುವುದು ಮಾನ್ಯ ಸದಸ್ಯರ ನಜರಿಗೆ ಬಂದಿದ್ದುಂಟು. ಅದಕ್ಕೋಸ್ಕರವಾಗಿ ನಾವು ಹೇಳುತ್ತಿರುವುದು. ಅದಕ್ಕೆ ಒಂದು ಸಬ್ ಕಮಿಟಿ ಮಾಡಿ ಅದರಿಂದ ವರದಿ ತರಿಸಿ, ವರದಿ ಬಂದ ಮೇಲೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಎ. ಆರ್ ಬದರಿನಾರಾಯಣ :—ಮಾನ್ಯ ಸದಸ್ಯರು ಹೇಳುತ್ತಾರೆ. ಸದಸ್ಯರ ಗಮನಕ್ಕೆ ಬಂದಿದೆಯೆಂದು, ಅವರ ಗಮನಕ್ಕೆ ಬಂದಮೇಲೆ ಅದನ್ನು ಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದರೆ ಮುಂದಿನ ಕ್ರಮ ಸರ್ಕಾರ ತೆಗೆದು ಕೊಳ್ಳುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ಸಾಯ್ಡು :—ಎಲ್ಲಾ ಹಾಸ್ಪೆಲ್‌ಗಳನ್ನು ಜನರಲ್ ಹಾಸ್ಪೆಲ್‌ಗಳೆಂದು ಮಾಡುವುದಕ್ಕೆ ಸರ್ಕಾರ ಒಂದು ಆದೇಶ ಕೊಡುವುದಕ್ಕೆ ಏನು ತೊಂದರೆ ಇದೆ ಸ್ವಾಮಿ ?

Sri A. R. Badarinarayana :—I think the Hon. Member will see that a policy statement is made by Government, by making a request to the Government in this matter.

ಶ್ರೀ ಕೆ. ಸಿದ್ದಯ್ಯ :— ಮುಂಚೆ ನನ್ನ ಪ್ರಶ್ನೆಗೆ ಸ್ಪೆಸಿಫಿಕ್ ಆಗಿ ಉತ್ತರ ಬಂದಿಲ್ಲ ಈ ಹಾಸ್ಪೆಲ್‌ನಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಬೋರ್ಡರ್ಸ್ ಎಷ್ಟು ಜನರಿದ್ದಾರೆ, ಮ್ಯಾನೇಜ್‌ಮೆಂಟ್‌ನಲ್ಲಿ ಎಷ್ಟು ಜನ ಶೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರಿದ್ದಾರೆ, ಕಿಚನ್‌ನಲ್ಲಿ ಎಷ್ಟು ಜನರಿದ್ದಾರೆ. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರಿಲ್ಲದಿದ್ದರೆ ಮತ್ತು ಬೋರ್ಡರ್ಸ್ ಇಲ್ಲದಿದ್ದರೆ ಅವರಿಗೆ ಅಲ್ಲಿ ಅವಕಾಶ ಕೊಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ :—ತಾವು ಜನರಲ್ ಆಗಿ ಕೇಳಿದ್ದೀರಿ. ಆದ್ದರಿಂದ ನನ್ನ ಹತ್ತಿರ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ಸ್ ಎಷ್ಟು ಇದ್ದಾರೆಂದು ಲೆಕ್ಕ ಇಲ್ಲ. ಕಿಚನ್‌ನಲ್ಲಿ, ಮ್ಯಾನೇಜ್‌ಮೆಂಟ್‌ನಲ್ಲಿ ಯಾವ ಯಾವ ಜಾತಿಯವರು ಇದ್ದಾರೆ, ಕುಕ್ಸ್ ಯಾರು ಯಾರು ಇದ್ದಾರೆ ಇನ್‌ಕ್ಲೂಡಿಂಗ್ ಸ್ವೂಡೆಂಟ್ಸ್ ಎಷ್ಟೆಷ್ಟು ಜನರಿದ್ದಾರೆ ಎಂಬ ವಿವರ ಸದ್ಯದಲ್ಲಿ ನನ್ನ ಹತ್ತಿರ ಇಲ್ಲ.

MADAM SPEAKER :—We will take up the next quastion

ELECTION TO THE BELGAUM MUNICIPALITY

90. SRI B. B. SAYANAK (Belgaum). —

9. Will the Minister for Municipal Administration be pleased to state :—